**ಓ.ಎಸ್. ನಂಃ 94/2023**

**ಪಿ.ಡಬ್ಲ್ಯೂಃ 1**

**ದಿನಾಂಕ 13.09.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಟಿ.ಜಿ ವಕೀಲರಿಂದಃ**

1. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಕೆ.ಆರ್.ನಗರದಲ್ಲಿ ವಾಸವಿದ್ದೇನೆ ಎಂದರೆ ಸರಿ. ಪ್ರತಿವಾದಿ ವ್ಯವಸಾಯ ಮಾಡಿಕೊಂಡು ಹೊಸಹಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿರುತ್ತೇನೆ. ಇದೇ ದಾವಾ ಆಸ್ತಿಯ ಸಂಬಂದ ನಾನು ಕೆ.ಆರ್.ನಗರದ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 303/2020 ರಂತೆ ಶಾಶ್ವತ ನಿರ್ಬಂದಕಾಜ್ಞೆ ದಾವೆಯನ್ನು ಇದೇ ಪ್ರತಿವಾದಿಯ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 303/2020 ರಲ್ಲಿ ತಾತ್ಕಲಿಕ ತಡೆಯಾಜ್ಞೆ ಕೋರಿ ಸಲ್ಲಿಸಿದ ಅರ್ಜಿಯು ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ದ ನಾನು ಕೆ.ಆರ್.ನಗರದ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಎಂ.ಎ 3/2021 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿಯು ಸಹ ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

2. ಅಸಲು ದಾವೆ ಸಂಖ್ಯೆ 303/2020 ಹಾಗೂ ಎಂ.ಎ 3/2021 ರ ವಿಷಯಗಳ ಬಗ್ಗೆ ನೀವು ಈ ದಾವೆಯಲ್ಲಿ ಹೇಳಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಈ ದಾವೆಯ ವಾದಪತ್ರದಲ್ಲಿ ಹೇಳಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ಅಸಲು ದಾವೆ ಸಂಖ್ಯೆ 303/2020 ಹಾಗೂ ಎಂ.ಎ 3/2021 ರ ವಿಷಯಗಳ ಬಗ್ಗೆ ಮರೆಮಾಚಿ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

3. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ದಾವಾ ಆಸ್ತಿಯನ್ನು ತಾಲ್ಲೂಕು ಸರ್ವೆಯರ್ ಮೂಲಕ ಅಳತೆ ಮಾಡಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯು ನನ್ನ ಮತ್ತು ಸೋಮೇಗೌಡ, ತಿಮ್ಮೇಗೌಡ, ತಹಸೀಲ್ದಾರ ಹಾಗೂ ಎ.ಡಿ.ಎಲ್.ಆರ್ ವಿರುದ್ಧ ಡಿ.ಡಿ.ಎಲ್.ಆರ್ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅದು

ಬೇರೆ ಆಸ್ತಿ ಸಂಬಂದ ಪ್ರತಿವಾದಿಯು ಸದರಿ ಪ್ರಕರಣವನ್ನು ಹೂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 270 ರಲ್ಲಿ ಒಟ್ಟು 5 ಪೋಡುಗಳಿವೆ ಎಂದರೆ ಸರಿ. ಸದರಿ ಪ್ರಕರಣವನ್ನು ಡಿ.ಡಿ.ಎಲ್.ಆರ್ ರವರು ಪುರಸ್ಕರಿಸಿ ಸರ್ವೆ ನಂಬರ್ 270 ರ 5 ಪೋಡುಗಳನ್ನು ಸಹ ರದ್ದು ಮಾಡಿ ಕ್ರಯಪತ್ರದ ಅನುಗುಣವಾಗಿ ಹೊಸದಾಗಿ ಸರ್ವೆ ಮಾಡಬೇಕೆಂದು ಆದೇಶಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ಬೇರೆ ಆಸ್ತಿಯ ಸಂಬಂದ ಸದರಿ ಆದೇಶವಾಗಿರುತ್ತದೆ ಎಂದು ನುಡಿದಿರುತ್ತಾರೆ.

4. ಡಿ.ಡಿ.ಎಲ್.ಆರ್ ರವರು ಹೊರಡಿಸಿದ ಸದರಿ ಆದೇಶದ ಪ್ರಕಾರ ಸರ್ವೆ 270 ರಲ್ಲಿ ಹೊಸದಾಗಿ ಸರ್ವೆ ಮಾಡಿಸಿಕೊಡುವಂತೆ ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಅರ್ಜಿಯನ್ನು ನಾನು ಯಾವ ದಿನಾಂಕದಂದು ಕೊಟ್ಟಿರುತ್ತೇನೆ ಎಂದು ನನಗೆ ನೆನಪಿಲ್ಲ. ಡಿ.ಡಿ.ಎಲ್.ಆರ್ ರವರು ಹೊರಡಿಸಿದ ಆದೇಶದ ಬಳಿಕ ಯಾವುದೇ ಹೊಸ ಸರ್ವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

5. ಸರ್ವೆ ನಂಬರ್ 270 ರಲ್ಲಿ ಆದ ಪೋಡುಗಳನ್ನು ಡಿ.ಡಿ.ಎಲ್.ಆರ್ ರವರು ರದ್ದುಪಡಿಸಿದ ನಂತರ ಹೊಸ ಪೋಡುಗಳನ್ನು ಮಾಡಿಕೊಳ್ಳದೇ ಕಾನೂನು ಬಾಹಿರವಾಗಿ ನಾನು ನನ್ನ ಖರೀದಿ ಪತ್ರಕ್ಕೆ ತಿದ್ದುಪಡಿ ಖರೀದಿಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 270 ರಪೋಡುಗಳನು ರದ್ದಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ.3 ರ ತಿದ್ದುಪಡಿ ಕ್ರಯಪತ್ರವನ್ನು ಮಾಡುವ ಕಾಲಕ್ಕೆ ಸರ್ವೆ ನಂಬರ್ 270/3 ರ ಕಂದಾಯ ದಾಖಲೆಗಳು ಮಾರಾಟಗಾರರ ಹೆಸರಿನಲ್ಲಿ ಇತ್ತಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯ ಪಹಣಿಗಳು ಮೊದಲಿನಿಂದಲೂ ಮಾರಾಟಗಾರರ ಹೆಸರಿನಲ್ಲಿಯೇ ಇದ್ದು ಕೇವಲ ಚೆಕ್ಕುಬಂದಿ ತಪ್ಪಾಗಿ ನಮೂದಿಸಿರುವುದನ್ನು ನಾವು ನಿಪಿ.3 ರ ದಾಖಲೆಯಡಿಯಲ್ಲಿ ತಿದ್ದುಪಡಿಸಿ ಮಾಡಿಸಿಕೊಂಡಿರುತ್ತೇವೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

6. ಸರ್ವೆ ನಂಬರ್ 270/3 ರ ಕಂದಾಯ ದಾಖಲೆಗಳು ದಾವಾ ಆಸ್ತಿಯ ಮಾ ರಾಟಗಾರರ ಹೆಸರಿನಲ್ಲಿ ಇರದ ಕಾರಣ ಹಾಗೂ ಸರ್ವೆ ನಂಬರ್ 270 ರ ಪೋಡುಗಳು ರದ್ದಾಗಿರುವ ಕಾರಣ ಮಾರಾಟಗಾರರರಿಗೆ ನಿಪಿ.3 ರ ತಿದ್ದುಪಡಿ ಪತ್ರವನ್ನು ಬರೆದುಕೊಡಲು ಯಾವುದೇ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ.

7. ಸರ್ವೆ ನಂಬರ್ 270/2 ರಲ್ಲಿ 22 ಗುಂಟೆ ಜಮೀನನ್ನು ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಪ್ರತಿವಾದಿ ಖರೀದಿ ಮಾಡಿದ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ ಹಾಗೂ ಪ್ರತಿವಾದಿಯ ಸದರಿ ಖರೀದಿ ಪತ್ರದಲ್ಲಿ ಚೆಕ್ಕುಬಂದಿಗಳು ತಪ್ಪಾಗಿ ನಮೂದಾಗಿರುತ್ತದೆ. ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ ಮೇಲೆ ಪ್ರತಿವಾದಿಯ ಖರೀದಿ ಪತ್ರದಲ್ಲಿ ಅವರ ಜಮೀನಿನ ಚೆಕ್ಕುಬಂದಿ ತಪ್ಪಾಗಿ ನಮೂದಾಗಿರುವ ವಿಷಯ ನನಗೆ 2020 ರಲ್ಲಿ ಗೊತ್ತಾಗಿರುತ್ತದೆ. ಪ್ರತಿವಾದಿಯ ಖರೀದಿ ಪತ್ರದಲ್ಲಿ ಚೆಕ್ಕುಬಂದಿ ತಪ್ಪಾಗಿ ನಮೂದಾಗಿರುತ್ತದೆ ಎಂದು ನಾನು ಎಲ್ಲಿಯೂ ಸಹ ಪ್ರಶ್ನಿಸಿರುವುದಿಲ್ಲ.

8. ಸರ್ವೆ ನಂಬರ್ 270/5 ರಲ್ಲಿ ಪಿತ್ರಾರ್ಜಿತವಾಗಿ ಬಂದ 30 1/2 ಗುಂಟೆ ಜಮೀನನ್ನು ಪ್ರತಿವಾದಿಯು ನನಗೆ ದಾನವಾಗಿ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾನಪತ್ರದಲ್ಲಿ ಬರೆಸಿರುವ ವಿಷಯಗಳನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ 30 1/2 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ನಾಲೆ ಏರಿ, ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ  ಪ್ರತಿವಾದಿಯ ಉಳಿಕೆ ಜಮೀನು ಹಾಗೂ ದಕ್ಷಿಣಕ್ಕೆ ತಿಮ್ಮೇಗೌಡರ ಜಮೀನು ಇದೆ ಎಂದರೆ ಸರಿ. ಸದರಿ ದಾನಪತ್ರದ 30 1/2 ಗುಂಟೆ ಜಮೀನಿನ ಉತ್ತರ ದಿಕ್ಕಿನಲ್ಲಿ ಇರುವ ಜಮೀನು ಪ್ರತಿವಾದಿಯ ಸರ್ವೆ ನಂಬರ್ 270/2 ರಲ್ಲಿರುವ 22 ಗುಂಟೆ ಜಮೀನಾಗಿರುತ್ತದೆ ಎಂದರೆ ಸಾಕ್ಷಿಯು ಉತ್ತರ ದಿಕ್ಕಿನಲ್ಲಿ ಪ್ರತಿವಾದಿಯ 22 ಗುಂಟೆ ಜಮೀನು ಮತ್ತು ದಾವಾ ಆಸ್ತಿ ಎರಡು ಇದೆ ಎಂದು ನುಡಿದಿರುತ್ತಾರೆ. ದಾನಪತ್ರದ 30 1/2 ಗುಂಟೆ ಜಮೀನಿನ ಉತ್ತರ ದಿಕ್ಕಿನಲ್ಲಿ ಇರುವ ಪ್ರತಿವಾದಿಯ 22 ಗುಂಟೆ ಜಮೀನಿನ ಪಕ್ಕದಲ್ಲಿ ದಾವಾ ಆಸ್ತಿ ಇದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾನಪತ್ರದ 30 1/2 ಗುಂಟೆ ಜಮೀನಿನ ಉತ್ತರ ದಿಕ್ಕಿನಲ್ಲಿ ದಾವಾ ಆಸ್ತಿ ಇಲ್ಲದಿರುವ ಕಾರಣ ಅದನ್ನು ದಾನಪತ್ರದ ಚೆಕ್ಕುಬಂದಿಯಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾನಪತ್ರದ 30 1/2 ಗುಂಟೆ ಜಮೀನಿನ ಉತ್ತರ ದಿಕ್ಕಿಗೆ ಹೊಂದಿಕೊಂಡು ಪ್ರತಿವಾದಿಯ 22 ಗುಂಟೆ ಜಮೀನು ಇದ್ದು, ದಾವಾ ಆಸ್ತಿಯು ಕೇವಲ 9 ಗುಂಟೆ ಜಮೀನು ಆಗಿದ್ದ ಕಾರಣ ಹಾಗೂ ಪ್ರತಿವಾದಿಯ ಜಮೀನಿನ ವಿಸ್ತೀರ್ಣ ಹೆಚ್ಚು ಇರುವ ಕಾರಣ ದಾನಪತ್ರದಲ್ಲಿ ಕೇವಲ ಪ್ರತಿವವಾದಿಯ ಜಮೀನು ಮಾತ್ರ ತೋರಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ.

9. ಪ್ರತಿವಾದಿ ಖರೀದಿ ಮಾಡಿದ ಸರ್ವೆ ನಂಬರ್ 270/2 ರ 22 ಗುಂಟೆ ಜಮೀನಿನ ಖರೀದಿ ಪತ್ರದಲ್ಲಿ ಚೆಕ್ಕುಬಂದಿ ಪೂರ್ವಕ್ಕೆ ಬೀಳು ಕಾಲುವೆ, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ, ಉತ್ತರಕ್ಕೆ ನಂಜುಂಡೇಗೌಡರ ಜಮೀನು ಹಾಗೂ ದಕ್ಷಿಣಕ್ಕೆ ಕ್ರಯದಾರರ ಉಳಿಕೆ ಜಮೀನು ಇದೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಚೆಕ್ಕುಬಂದಿಗಳು ತಪ್ಪು ಎಂದು ನುಡಿದಿರುತ್ತಾರೆ. ಸದರಿ ಖರೀದಿ ಪತ್ರದ ಉತ್ತರ ದಿಕ್ಕಿಗೆ ನಂಜುಂಡೇಗೌಡರ ಜಮೀನು ಎಂದು ನಮೂದಾಗಿರುವ ಸದರಿ ಜಮೀನನ್ನು ನೀವು 2013 ರಲ್ಲಿ ಖರೀದಿ ಮಾಡಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ನಾನು ನಂಜುಂಡೇಗೌಡರಿಂದ 70/4 ರ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

10. ನಿಪಿ.4 ರಲ್ಲಿ ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ ಪ್ರತಿವಾದಿಯ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.4 ರಲ್ಲಿ ಹೇಳಿರುವ ಚೆಕ್ಕುಬಂದಿಯಲ್ಲಿ ದಕ್ಷಿಣ ದಿಕ್ಕಿಗೆ ನನ್ನ ಮತ್ತು ನಂಜುಂಡೇಗೌಡರ ಜಮೀನು ಇದೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ಅಸಲು ದಾವೆ ಸಂಖ್ಯೆ 303/2020 ರಲ್ಲಿ ತಾತ್ಕಲಿಕ ತಡೆಯಾಜ್ಞೆ ಕೋರಿ ಸಲ್ಲಿಸಿದ ನನ್ನ ಮಧ್ಯಂತರ ಅರ್ಜಿಯು ವಜಾಗೊಂಡ ನಂತರ ನಾನು ನಿಪಿ.3 ರ ದಾಖಲೆಯನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ.

11. ಪ್ರತಿವಾದಿಯು ಖರೀದಿ ಮಾಡಿದ 22 ಗುಂಟೆ ಜಮೀನಿನ ದಿಃ 20.03.1991ರ ಖರೀದಿ ಪತ್ರದಲ್ಲಿ ಹೇಳಿರುವಂತಹ ಚೆಕ್ಕುಬಂದಿ ಮಧ್ಯೆ ಇರುವ 22 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇಂದಿನವರೆಗೂ ಇರುತ್ತಾರೆ ಎಂದರೆ ಸರಿಯಲ್ಲ. ದಿಃ 20.03.1991 ರ ಖರೀದಿ ಪತ್ರದಲ್ಲಿ ಹೇಳಿರುವ ಚೆಕ್ಕುಬಂದಿಗಳ ಮಧ್ಯೆ ಇರುವ 22 ಗುಂಟೆ ಜಮೀನಿನ ಮೇಲೆ ಮಾರಾಟಗಾರನಾದ ನಂಜುಂಡೇಗೌಡರಿಗಾಗಲೀ ಅಥವಾ ನನಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಬರೆಸಿರುವಂತಹ ಚೆಕ್ಕುಬಂದಿಗಳ ಮಧ್ಯೆ ಇರುವ ಆಸ್ತಿಯ ಮೇಲೆ ನನಗೆ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿಗೆ ನಾನೇ ವಿನಾಕಾರಣ ಹೋಗಿ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.5 ರ ಪೋಟೋಗಳು ಪ್ರತಿವಾದಿಯ ಜಮೀನಿಗೆ ಸೇರಿದ ಪೋಟೋಗಳಾಗಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ**

ದಿನಾಂಕ 25.01.2024 ರಂದು ಪೋಲಿಸರು ನೀಡಿದ ಸ್ವೀಕೃತಿ ಮತ್ತು ಹಿಂಬರಹವನ್ನು ನಿಪಿ.6 ಮತ್ತು 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು**

ನಿಪಿ.6 ರಂತೆ ಪೋಲಿಸರು ನೀಡಿದ ಸ್ವೀಕೃತಿಗೆ ಅನುಗುಣವಾಗಿ ಕೊಟ್ಟ ದೂರನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ.6 ಮತ್ತು 7 ರ ದಾಖಲೆಗಳನ್ನು ನಾನು ಈ ದಾವೆಗೋಸ್ಕರ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ನನ್ನ ಅಕ್ಕಪಕ್ಕದ ಜಮೀನಿನ ಮಾಲೀಕರನ್ನು ಕರೆದು ಸಾಕ್ಷಿ ವಿಚಾರಣೆ ಮಾಡಿಸಬಹುದು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**